(ಗೊಂದಲ)

ಶ್ರೀ ಎ. ಕೃಷ್ಣಪ್ಪ : ಮಾನ್ಯ ಯಡಿಯೂರಪ್ಪನವರು ಇಲ್ಲಿ ಕುಳಿತುಕೊಂಡು ಕೆಲಸ ಮಾಡುವಾಗ ಅವರ ಭಾವನೆಗಳು ಏನಿತ್ತು? ನಿಮ್ಮ ನೀತಿಗಳು ಏನಿತ್ತು ಅದೆಲ್ಲಾ ಈಗ ಕಾರ್ಯರೂಪದಲ್ಲಿ ಇಲ್ಲ. ಇದು ಒಂದು ಬಾರಿ ಅಲ್ಲಿ, ಬೆಂಗಳೂರಿನಲ್ಲಿ ಇತ್ತೀಚೆಗೆ ಅದಂತಹ ಐದಾರು ಕಾರ್ಯಕ್ರಮಗಳಲ್ಲಿ ಈ ನಡತೆಯನ್ನು ನಾವು ಕಣ್ಣಾರೆ ನೋಡಿದ್ದೇವೆ.

(ಗೊಂದಲ)

ಶ್ರೀ ಎನ್.ಎಸ್. ಬೋಸರಾಜು : ನಾವು ಶ್ರೀಮಾನ್ ಯಡಿಯೂರಪ್ಪನವರನ್ನು ಹಾಗೂ ರಲ್ಲರನ್ನು ಕರೆಮಕೊಂಡು ಪ್ರಧಾನ ಮಂತ್ರಿಗಳ ಹತ್ತಿರ ಇದೇ ಯೋಜನೆ ವಿಚಾರದಲ್ಲಿ ಹೋಗಿದ್ದೆವು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಯಡಿಯೂರಪ್ಪನವರೆ ನಾವು ಬೇಕೆಂದೇ ರಾಜಕೀಯವನ್ನು ಮಾಡುತ್ತಿಲ್ಲ. ಉದ್ದೇಶಪೂರ್ವಕವಾಗಿ ಮೊದಲನೆಯದಾಗಿ ಮೇಯರ್‌ರವರಿಗೆ ಮಾಡಿರತಕ್ಕಂಥ ಅಪರಾಧ ಎರಡನೆಯದು ಈ ರಾಜ್ಯದ ಭಾಷೆ ಕನ್ನಡವನ್ನು ಪತ್ರಿಕೆಯಲ್ಲಿ ಹಾಕದೆ ಕನ್ನಡ ಭಾಷೆಯನ್ನು ಕಡೆಗಾಣಿಸಿರತಕ್ಕಂಥಾದ್ದು. ಇನ್ನು ಮೂರನೇಯದು ವಿರೋಧ ಪಕ್ಷದ ನಾಯಕರನ್ನು ಕರೆಯದೆ, ಅವರ ಪಕ್ಷದವರು ಪ್ರಧಾನ ಮಂತ್ರಿಗಳಾಗಿದ್ದಾರೆ. ಆ ಸಮಾರಂಭದಲ್ಲೆ ವಿರೋಧ ಲಕ್ಷದ ನಾಯಕರು ಹೋಗಿದ್ದಾರೆಯೇ ಹೊರತು ಅವರನ್ನು ಮೇಲಕ್ಕೆ ಕರೆಯಲಿಲ್ಲ. ಮತ್ತು ಶಾಸಕರುಗಳನ್ನು ಹಾಗೂ ಎಲ್ಲಾ ಪಕ್ಷದ ಮುಖಂಡರುಗಳನ್ನು ಕಡೆಯದೆ ಅಪರಾಧ ಮಾಡಿದ್ದಾರೆ. ಇದು ಸರ್ಕಾರ ಮಾಡಿರತಕ್ಕಂಥ ಬೇಜವಾಬ್ದಾರಿ ಎಂದು ಹೇಳಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ಇದು ಒಳ್ಳೆಯದಲ್ಲ. ಇದು ಈ ರಾಜ್ಯಕ್ಕೆ ಮಾಡಿರತಕ್ಕಂಥ ಅಗೌರವ ಹಾಗೂ ಅಪಮಾನ ಏನಿದು?

ಉಪಾಧ್ಯಕ್ಷರು : ವಾಟಾಳ್ ನಾಗರಾಜ್ ರವರೇ, ನೀವು ಮಾತನಾಡುವುದಕ್ಕೆ ಕೇಳಿದಿರಿ. ಅದಕ್ಕೆ ಪರ್ಮಿಷನ್ ಕೊಟ್ಟಿದ್ದೇನೆ. ಈಗ ಏನು ಲೋಪದೋಷಗಳು ಆಗಿವೆ ಅವುಗಳನ್ನು ಸರಿಪಡಿಸುತ್ತೇವೆ ಎಮದು ಹೇಳಿದ್ದಾರಲ್ಲಾ. ಮುಂದೆ ಆಗದ ಹಾಗೆ ಕಟ್ಟೆಚ್ಚರ ವಹಿಸುತ್ತೇವೆ ಎಂದು ಹೇಳಿದ್ದಾರೆ. ಬನ್ನಿ ಬನ್ನಿ. ಈಗ ಗಮನ ಸೆಳೆಯುವ ಸೂಚನೆ ಮಾನ್ಯ ಹೆಚ್.ಡಿ. ಬಸವರಾಜ್.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಇದು ಸ್ವಾಭಿಮಾನದ ಪ್ರಶ್ನೆ. ಇವರು ಕಾರ್ಯಕ್ರಮಕ್ಕೆ ನಮ್ಮನ್ನು ಕರೆಯುವುದೇ ಇಲ್ಲವೆಂದರೆ ಹೇಗೆ?

(ಶ್ರೀ ಸಿ.ಜೆ.ಸಿ. ಮಾಧುಸ್ವಾಮಿಯವರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಎಲ್ಲಾ ಶಾಸಕರನ್ನು ಈ ಎರಡೂ ಕಾರ್ಯಕ್ರಮಕ್ಕೆ ಆಮಂತ್ರಣ ಮಾಡಬೇಕಾಗಿತ್ತು.

(ಈ ಹಂತದಲ್ಲಿ ಶ್ರೀ ಜಿ.ಎ. ಶ್ರೀರಾಮರೆಡ್ಡಿ ಹಾಗೂ ಶ್ರೀ ಎಸ್. ರಾಜೇಂದ್ರನ್ ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬಿ.ಎಸ್. ಯಡಿಯೂರಪ್ಪನವರು ವಿರೋಧ ಪಕ್ಷದ ಕಡೆಯಲ್ಲಿ ಕುಳಿತಿದ್ದಾಗ ಸೌಜನ್ಯಗಳ ಸರಿಮಳೆಯನ್ನೇ ಹರಿಸುತ್ತಿದ್ದರು. ಈಗ ಆ ಕಡೆಗೆ ಹೋದ ಮೇಲೆ ಆ ಸೌಜನ್ಯವೇ ಹೋಗಿ ಬಿಟ್ಟಿತು. ಅವರು ಈ ಕಡೆಗೆ ಇದ್ದಾಗ ಎಷ್ಟು ಸೌಜನ್ಯವಾಗಿ ಮಾತನಾಡುತ್ತಿದ್ದರು. ಈ ಕಡೆಗೆ ಇದ್ದಾಗ ಸೌಜನ್ಯದ ಸುರಿಮಳೆಯನ್ನು ಹರಿಸುತ್ತಿದ್ದ ಮಾನ್ಯ ಯಡಿಯೂರಪ್ಪನವರು, ಆ ಕಡೆಗೆ ಹೋದ ಮೇಲೆ ಸೌಜನ್ಯ ಎಲ್ಲಿ ಹೋಯಿತು?

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, it is a shame. ನಾಚಿಕೆ ಇಲ್ಲದ ಜನರು ಇಲ್ಲಿ ಕುಳಿತಿದ್ದಾರೆ. ಅಷ್ಟೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಉಪಾಧ್ಯಕ್ಷರೆ, ನಾವು ಕೂಡ ಸಭಾತ್ಯಾಗವನ್ನು ಮಾಡುತ್ತಿದ್ದೇವೆ. ಇನ್ನು ಮುಂದೆ ಇಂತಹ ತಪ್ಪುಗಳನ್ನು ಮಾಡದಂತೆ ತಿದ್ದುಕೊಳ್ಳಬೇಕೆಂದು ಹೇಳುತ್ತೇನೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸಭಾತ್ಯಾಗವನ್ನು ಮಾಡಿದರು)

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಸಭೆಯಲ್ಲಿ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಇದ್ದಾರೆ. ನಾನು ಈ ಬಗ್ಗೆ ಹಿಂದೆ ಸಭೆಯಲ್ಲಿ ಹೇಳಿದ್ದೇನೆ. ತಾವು ಸುತ್ತೋಲೆಯನ್ನು ಕಳುಹಿಸಿದ್ದೇವೆಂದು ಹೇಳಿದ್ದಿರಲ್ಲಾ. ಅದರಲ್ಲಿ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಎಲ್ಲಾದರೂ ಬರೆದಿದ್ದಾರೆಯೆ ಎಂಬುದನ್ನು ತಾವು ನೋಡಿ. ಆ ಸುತ್ತೋಲೆಯಲ್ಲಿ ಆ ರೀತಿ ಎಲ್ಲೂ ಇಲ್ಲ? ಶಾಸಕರನ್ನು ಕರೆಯಬೇಕೆಂದು ಬರೆದಿದ್ದಾರೆ ಅಷ್ಟೆ. ನಾವು ಹೇಳುತ್ತೇವೆ. ತಾವು ದಯಮಾಡಿ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಸುತ್ತೋಲೆಯಲ್ಲಿ ಮಾಡಿ.

(ಈ ಹಂತದಲ್ಲಿ ಮಾನ್ಯ ಎಸ್.ಎಸ್. ಪಾಟೀಲ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಉಪಾಧ್ಯಕ್ಷರೆ, ಇವರಿಗೆ ವಾಕ್‌ಔಟ್ ಮಾಡುವುದು ಇದೇ ಕೆಲಸ ಆಗಿ ಹೋಯಿತು. ಪ್ರತಿಯೊಂದು ವಿಚಾರಕ್ಕೂ ವಾಕ್‌ಔಟ್ ಮಾಡುತ್ತಾರೆ. ಮಾನ್ಯ ಬಸವರಾಜ ರಾಯರೆಡ್ಡಿಯವರೆ, ನೀವು ಹೋಗಿ, ಇದೇ ಕೆಲಸ, ನೀವು ವಾಕ್‌ಔಟ್ ಮಾಡುವುದು ಇದೇ ಕೆಲಸ, ಜನರೆಲ್ಲಾ ನಿಮಗೆ x

(ಶ್ರೀ ಬಸವರಾಜರಾಯರೆಡ್ಡಿಯವರು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು : ಮಾನ್ಯ ಹೆಚ್.ಡಿ. ಬಸವರಾಜ್‌ರವರೆ, ತಾವು ಪ್ರಸ್ತಾಪ ಮಾಡಿ.

(x ಈ ಪದವನ್ನು ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ಈ ಚಿಹ್ನೆ ಸೂಚಿಸುತ್ತದೆ.)

(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ಉಪಾಧ್ಯಕ್ಷರೆ. ಮೈಸೂರು ಮುಕ್ತ ವಿಶ್ವವಿದ್ಯಾಲಯದ ಬಗ್ಗೆ ಮಾತನಾಡಬೇಕು.

ಉಪಾಧ್ಯಕ್ಷರು: ಮಾನ್ಯ ಪುಟ್ಟೇಗೌಡರೆ, ಒಂದು ನಿಮಿಷ. ಈಗ ಶ್ರೀ ಹೆಚ್.ಡಿ. ಬಸವರಾಜು ಅವರ ಗಮನ ಸೆಳೆಯುವ ಸೂಚನೆ ಇದೆ. ಅದು ಮುಗಿಯಲಿ.

ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ಉಪಾಧ್ಯಕ್ಷರೆ, ಅದು ಆದಮೇಲೆ ಮಾತನಾಡಲು ದಯಮಾಡಿ ನಮಗೆ ಅವಕಾಶವನ್ನು ಕೊಡಿ.

ಉಪಾಧ್ಯಕ್ಷರು : ಆಯಿತು. ಕೊಡುತ್ತೇನೆ.

7. ಗಮನ ಸೆಳೆಯುವ ಸೂಚನೆಗಳು

(ಅ) ವಿಷಯ : ಕೊಡಗು ಜಿಲ್ಲೆಯಲ್ಲಿ ಮಳೆಹಾನಿಯಿಂದ ರಸ್ತೆಗಳು ತೀವ್ರ ಹದಗೆಟ್ಟಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗಿರುವ ಬಗ್ಗೆ.

ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಉಪಾಧ್ಯಕ್ಷರೆ, ಕೊಡಗು ಜಿಲ್ಲೆಯಲ್ಲಿ ಮೇ ತಿಂಗಳಲ್ಲಿ ಸುರಿದಂಥ ಮಳೆಯಿಂದಾಗಿ ರಸ್ತೆಗಳಿಗೆ ಖಾಸಗಿ ಆಸ್ತಿಗಳಿಗೆ ಅತಿ ಹೆಚ್ಚಿನ ನಷ್ಟ ಸಂಭವಿಸಿದೆ. ಈ ಸಂದರ್ಭದಲ್ಲಿ ಸರ್ಕಾರದ ವತಿಯಿಂದ, ಆ ಪ್ರದೇಶಗಳಿಗೆ ಬೇಟಿ ನೀಡಿ ಆಗಿರುವಂತಹ ನಷ್ಟವನ್ನು, ಹಾಗು ಅದಕ್ಕೆ ಕೊಡಬೇಕಾಗಿರುವಂತಹ ಪರಿಹಾರವನ್ನು ಮತ್ತೆ ಪರಿಹಾರದ ಕೆಲಸವನ್ನು ಮಾಡಬೇಕಾದಂಥ ಸರ್ಕಾರಿ ಅಧಿಕಾರಿಗಳು ನಿಷ್ಕ್ರಿಯರಾಗಿ ಇದ್ದಾರೆ. ಇದರ ಬಗ್ಗೆ ನನ್ನ ಆರೋಪ ಇದೆ. ಇವತ್ತು ಸರ್ಕಾರ ಹಣವನ್ನು ಬಿಡುಗಡೆ ಮಾಡುವುದಕ್ಕೆ ಮತ್ತೆ ಮಾಡಿರುವಂತಹ ಹಣವನ್ನು ಕಾರ್ಯಗತ ಮಾಡುವುದಕ್ಕೆ ಸರ್ಕಾರ ನೇಮಕ ಮಾಡಿರುವಂಥ ಅಧಿಕಾರಿಗಳು, ಕ್ರಮ ಕೈಗೊಳ್ಳದೇ ಇರುವುದರ ವಿರುದ್ಧ ನಾನು ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ. ಅದೇ ರೀತಿಯಲ್ಲಿ ಈ ನಷ್ಟಕ್ಕೆ ಸರ್ಕಾರವೂ ಕೂಡ ಹಣವನ್ನು ಹೆಚ್ಚಿನ ರೀತಿಯಲ್ಲಿ ಬಿಡುಗಡೆ ಮಾಡಬೇಕೆಂದು ಹೇಳುತ್ತಿದ್ದೇನೆ. ಇವತ್ತು ಕೊಡಗು ಜಿಲ್ಲೆಯಲ್ಲಿ ಅಲ್ಲಿನ ಜನತೆ, ಈ ಬಗ್ಗೆ ನಾನು ಮಲೆನಾಡು ಎಂದು ಪೂರ್ಣವಾಗಿ ಹೇಳಬೇಕಾಗುತ್ತದೆ. ಅದು ದಕ್ಷಿಣ ಕನ್ನಡವಾಗಲಿ, ಚಿಕ್ಕಮಗಳೂರು ಆಗಲಿ, ಕೊಡಗು ಆಗಲಿ, ಈ ಭಾಗಗಳಲ್ಲಿ.....

ಉಪಾಧ್ಯಕ್ಷರು : ಮಾನ್ಯ ಹೆಚ್.ಡಿ. ಬಸವರಾಜ್‌ರವರೆ, ತಾವು ವಿಷಯದ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಿರಿ, ಅನಂತರ ಮಾನ್ಯ ಮಂತ್ರಿಯವರು ಉತ್ತರವನ್ನು ಕೊಡುತ್ತಾರೆ. ಅನಂತರ ತಾವು ಉತ್ತರವನ್ನು ಕೇಳಿ, ಬೇಕಾದರೆ ಭಾಷಣವನ್ನು ಮಾಡಿ. ಈಗ ವಿಷಯಕ್ಕೆ ಸಂಬಂಧಪಟ್ಟಂತೆ ಗಮನವನ್ನು ಸೆಳೆಯಿರಿ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಉಪಾಧ್ಯಕ್ಷರೆ, ತಮ್ಮ ಮುಖಾಂತರ ಟೋಕೋಪಯೋಗಿ ಸಚಿವರಲ್ಲಿ ಮಳೆ ಹಾನಿಯಿಂದ ಆದಂಥ ವ್ಯವಸ್ಥೆಯ ಬಗ್ಗೆ ಸರ್ಕಾರ